## ಪ್ರಕಾಶ್ ಬಡವನಹಳ್ಳಿ (1978–2021)

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನವರಾದ ಪ್ರಕಾಶ್, ವಿದ್ಯಾಭ್ಯಾಸ ಮಾಡಿದ್ದು ಬಡವನಹಳ್ಳಿ, ಮಲ್ಲಾಡಿಹಳ್ಳಿ, ಮಧುಗಿರಿ ಹಾಗೂ ತುಮಕೂರುಗಳಲ್ಲಿ. ಕನ್ನಡ ಸಾಹಿತ್ಯದಲ್ಲಿ ಎಂ.ಎ. ಪದವಿ. ಕನ್ನಡ ವಿಶ್ವವಿದ್ಯಾಲಯದಿಂದ 'ಡಿ.ಆರ್. ನಾಗರಾಜ್ ವಿಮರ್ಶೆಯಲ್ಲಿ ದ್ವಂದ್ವಾತ್ಮಕ ವಿನ್ಯಾಸ' ಎಂಬ ವಿಷಯದ ಕುರಿತು ಪಿಎಚ್.ಡಿ. ಪದವಿ ಪಡೆದರು. ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಕೊಣನೂರಿನ ಸರ್ಕಾರಿ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದರು.

ಕನ್ನಡ ಸಾಹಿತ್ಯದ ಗಂಭೀರ ಓದುಗರಾಗಿದ್ದ ಪ್ರಕಾಶ್, ಸಾಹಿತ್ಯ ಕೃತಿಗಳ ಕುರಿತಂತೆ ವಿಶಿಷ್ಟ ಒಳನೋಟಗಳನ್ನು ತಮ್ಮ ಭಾಷಣ, ಬರಹಗಳಲ್ಲಿ ಕೊಡುತ್ತಿದ್ದರು. 'ಡಿ.ಆರ್. ನಾಗರಾಜ ವಿಮರ್ಶೆಯ ಕಥನ' ಅವರ ಮೊದಲ ಪುಸ್ತಕ. ಖಚಿತ ಹಾಗೂ ನಿಷ್ಠುರ ನೋಟಗಳು, ಗ್ರಹಿಕೆಗಳು ಅವರ ಬರಹಗಳಲ್ಲಿ ಕಾಣುತ್ತವೆ. ಇವು ಅವರ ಬರಹಗಳ ಪ್ರಮುಖ ಗುಣಗಳೂ ಆಗಿವೆ. ವಿಮರ್ಶೆ, ಸಂಸ್ಕೃತಿಯ ಬಗ್ಗೆ ಪ್ರಖರ ಚಿಂತನೆ ನಡೆಸಿದ್ದ ಈ ಪ್ರತಿಭಾವಂತನ ವಿಚಾರಗಳು 'ನುಡಿಸಂಕಥನ' ಕೃತಿಯಲ್ಲಿ ಸೇರಿವೆ.

ಅವರ ಪ್ರಭಾವದಿಂದಲೇ ಮೂಡಿದ್ದು. ಹಾಗೆ ನೋಡಿದರೆ, ಸೃಜನ ಮತ್ತು ಸೃಜನೇತರ ಎಂಬ ಸಾಹಿತ್ಯದ ಗೆರೆಗಳನ್ನು ಛಿದ್ರಗೊಳಿಸಿದ ಚಿಂತಕರಲ್ಲಿ ಡಿ.ಆರ್ ಮೊದಲಿಗರೇನೂ ಅಲ್ಲ. ಹಾಗೆ ಮಾಡಿದ ಒಂದು ದೊಡ್ಡ ಪರಂಪರೆಯೇ ಕನ್ನಡದಲ್ಲಿದೆ. ಪ್ರಕಾಶ್ ಆ ಪರಂಪರೆಯ ವಾರಸುದಾರರಾಗಲು ಪ್ರಯತ್ನಿಸುತ್ತಿದ್ದುದು ಅವರ ಬರಹಗಳಲ್ಲಿ ಕಾಣಸುತ್ತದೆ.

ಸಾಹಿತ್ಯ ಮತ್ತು ಸಮಾಜಗಳು ಹಲವು ಕಾರಣಗಳಿಂದಾಗಿ ರಾಹು ಬಡಿದಂತೆ, ಗ್ರಹಣ ಹಿಡಿದಂತೆ ಕೂತುಬಿಟ್ಟಾಗ ತುಸು ಮಟ್ಟಿಗೆ ಹಳಹಳಿಕೆಯೂ ಉಪಯೋಗಕ್ಕೆ ಬರುತ್ತದೆಂದು ಕಾಣುತ್ತದೆ. ಹಳೆಯದನ್ನು ನೆನಪಿಸಿಕೊಂಡು, ಅದರ ಹುಡುಕಾಟದಲ್ಲಿ ಮುಳುಗಿ, ಅದನ್ನು ಸಂಗ್ರಹಿಸುವ, ನೆನಪುಗಳ ಮೂಲಕ ವರ್ತಮಾನವು ತಬ್ಬಲಿಯಾಗದಂತೆ ನೋಡಿಕೊಳ್ಳುವ ಎಚ್ಚರ ಅಲ್ಲಿ ಕೆಲಸ ಮಾಡುತ್ತಿರುತ್ತದೆ. ಶರಣ ಚಳವಳಿ ಕನ್ನಡದ ಲೋಕ ಚಿಂತನೆಗೆ ಪ್ರಿಯವಾದ ನೆನಪು. ವರ್ತಮಾನದ ಬಿಕ್ಕಟ್ಟುಗಳನ್ನು ನಿಭಾಯಿಸಲು ಪದೇಪದೇ ಶರಣರಲ್ಲಿಗೆ ಹೋಗಿ ಮದ್ದು ಕೇಳುವುದನ್ನು ನಮ್ಮ ಲೋಕ ಚಿಂತಕರು ಮಾಡಿದ್ದಾರೆ. ಹಾಗಾಗಿ, ಶರಣರ, ಅದರಲ್ಲೂ ಅಲ್ಲಮನ ಕ್ರಿಯಾದ್ವೈತ ಮತ್ತು ಸಾಮಾಜಿಕ ಅದ್ವೈತದ ಮಾದರಿಯನ್ನು ಪ್ರಕಾಶ್ ಗುರುತಿಸುತ್ತಾರೆ ಮತ್ತು ದಾಖಲಿಸುತ್ತಾರೆ.

ರಾಷ್ಟ್ರವಾದದ ವಿಷಯ ಬಂದಾಗ ಪ್ರಕಾಶ್ ಯುರೋಪಿನ ಚಿಂತಕರಂತೆ ಭೀತಿಯ ಧೋರಣೆ ತಳೆಯುವುದಿಲ್ಲ. ಅವರಿಗೆ ರಾಷ್ಟ್ರ–ರಾಷ್ಟ್ರೀಯತೆಗಳೆಂಬ ಆಧುನಿಕ ರಚನೆಗಳು ದಿಗಿಲು ಹುಟ್ಟಿಸುವುದಿಲ್ಲ. ಯಾಕೆಂದರೆ, ಪ್ರಕಾಶ್ ಟ್ಯಾಗೋರ್ ಮತ್ತು ಗಾಂಧಿ ಮಾದರಿಯ ರಾಷ್ಟ್ರದ ಚಿಂತನೆಗಳ ಬದಲಾಗಿ ಅಂಬೇಡ್ಕರ್ ಮಾದರಿಯ ರಾಷ್ಟ್ರವಾದವನ್ನು ಮಂಡಿಸುತ್ತಾರೆ. ಸಾಮಾಜಿಕ ನ್ಯಾಯದ ಮೇಲೆ ನಿಂತ, ಹೆಚ್ಚು ಲಿಬರಲ್ ಆದ ರಾಷ್ಟ್ರವಾದಿ ಚಿಂತನೆ ಮುಖ್ಯವೆಂದು ಪ್ರತಿಪಾದಿಸುತ್ತಾರೆ.

ಸಂಸ್ಕೃತಿ ಚಿಂತನೆಗಳಲ್ಲಿ ತೊಡಗಿದ ಯಾವುದೇ ವ್ಯಕ್ತಿ ಏಕಾಂಗಿಯಾದರೆ ಅದರ ನಷ್ಟವನ್ನು ಸಮಾಜ ಹೊರಬೇಕು. ಬಹುಜನರು–ಸಮುದಾಯದ ಜೊತೆಗಿನ ಒಡನಾಟ, ಅರಿವಿನ ಕೊಡುಕೊಳೆ ಒಂದು ಚಳವಳಿಯ ಮಾದರಿಯಲ್ಲಿ ನಡೆದಾಗ ಮಾತ್ರ ಶಕ್ತಿ ಇದ್ದವರು ಸಾರ್ವಜನಿಕ ಬುದ್ಧಿಜೀವಿಗಳಾಗಲು ಸಾಧ್ಯ. ಈ ತರಹದ ವಾತಾವರಣ ಇಲ್ಲದ ಈ ತಲೆಮಾರು ತಬ್ಬಲಿ ಮತ್ತು ಶಾಪಗ್ರಸ್ತ ಎನ್ನಿಸುತ್ತದೆ. ಹಾಗಾಗಿ, ಪ್ರಕಾಶ್ ಈ ತಲೆಮಾರಿನ ಪ್ರತಿನಿಧಿ. ವಿದ್ವತ್ತು ಲಕ್ವಾ